RNU AIR DHARWAD

JULY 10, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**1.** ಇಂದು, ಗುರು ಪೂರ್ಣಿಮೆ, ನಾಡಿನಾದ್ಯಂತ ಶ್ರದ್ಧಾ-ಭಕ್ತಿಯಿಂದ ಜರುಗುತ್ತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೋಲಾರ ಸೇರಿದಂತೆ, ಹಲವೆಡೆ ದೇಗುಲಗಳಲ್ಲಿ ಪೂಜಾ ಕೈಂಕರ್ಯ ವಿಜೃಂಭಣೆಯಿಂದ ಆಯೋಜಿತವಾಗಿವೆ.

<><><>

**2.** ಆತ್ಮ ನಿರ್ಭರ ಭಾರತ ಅಭಿಯಾನದಡಿ, ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ, ನಿಯಮಬದ್ಧಗೊಳಿಸುವಿಕೆ ಯೋಜನೆ, ಪಿ.ಎಂ.ಎಫ್.ಎಂ.ಇ., ರೈತರಿಗೆ, ಯುವ ಉದ್ಯಮಿಗಳಿಗೆ ವರದಾನವಾಗಲಿದೆ ಎಂದು, ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮದ ವ್ಯವಸ್ಥಾಪಕ ನಿರ್ದೇಶಕ, ಸಿ.ಎನ್. ಶಿವಪ್ರಕಾಶ ಹೇಳಿದ್ದಾರೆ. ಧಾರವಾಡ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ, ಕೃಷಿ ಇಲಾಖೆ ಸಹಯೋಗದಲ್ಲಿ, ಪಿ.ಎಂ.ಎಫ್.ಎಂ.ಇ. ಯೋಜನೆ ಕುರಿತು, ವಿವಿಧ ಪಾಲುದಾರರಿಗೆ ಆಯೋಜಿಸಿದ್ದ, ಅರಿವು ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು. 2026ರ ಮಾರ್ಚ್ ವರೆಗೆ ಯೋಜನೆ ವಿಸ್ತರಿಸಲಾಗಿದ್ದು, ಅರ್ಹ ಫಲಾನುಭವಿಗಳು ಸದುಪಯೋಗ ಪಡೆಯುವಂತೆ, ಕೋರಿದರು.

<><><>

ಧಾರವಾಡ ಜಿಲ್ಲೆ, ಪಿ.ಎಂ.ಎಫ್.ಎಂ.ಇ ಯೋಜನೆ ಸಂಪನ್ಮೂಲ ವ್ಯಕ್ತಿ, ಹುಬ್ಬಳ್ಳಿಯ ಬಸಪ್ಪ ಮುಧೋಳ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಬಸಪ್ಪ ಮುಧೋಳ ಧ್ವನಿ 35 ಸೆಕೆಂದುಗಳು

<><><>

**3.** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಮೇಕ್ ಇನ್ ಇಂಡಿಯಾ ಯೋಜನೆಗೆ, ಬಲ ತುಂಬಲು, ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕ ಭಾಗಕ್ಕೆ, ತಲಾ ಒಂದೊಂದು 'ಡಿಫೆನ್ಸ್ ಕಾರಿಡಾರ್' ಮಂಜೂರು ಮಾಡುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ರಕ್ಷಣಾ ಖಾತೆ ಸಚಿವ, ರಾಜನಾಥ್ ಸಿಂಗ್ ಅವರಿಗೆ, ಹೊಸ ದಿಲ್ಲಿಯಲ್ಲಿ, ಮನವಿ ಮಾಡಿದ್ದಾರೆ. ಬೆಂಗಳೂರು ಗ್ರಾಮಾಂತರ-ಕೋಲಾರ-ಚಿಕ್ಕಬಳ್ಳಾಪುರ ಹಾಗೂ ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ವಿಜಯಪುರ ಜಿಲ್ಲೆಗಳಿಗೆ, ಎರಡು ಪ್ರತ್ಯೇಕ ಡಿಫೆನ್ಸ್ ಕಾರಿಡಾರ್ ಪ್ರಸ್ತಾವಗಳ ಬಗ್ಗೆ, ಕೈಗಾರಿಕೆ ಖಾತೆ ಸಚಿವ ಎಂ.ಬಿ.ಪಾಟೀಲ, ಪೂರಕ ಮಾಹಿತಿ ಒದಗಿಸಿದರು.

<><><>

**4.** ರಾಜ್ಯದ **6** ನೀರಾವರಿ ಯೋಜನೆ ಕಾಮಗಾರಿಗಳಿಗೆ, ಒಟ್ಟು **11** ಸಾವಿರದ **122** ಕೋಟಿ ರೂಪಾಯಿ ಅನುದಾನ ಒದಗಿಸುವಂತೆ, ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾಗಿ, ಜಲ ಸಂಪನ್ಮೂಲ ಖಾತೆ ಸಚಿವ, ಡಿ.ಕೆ. ಶಿವಕುಮಾರ, ಹೊಸ ದಿಲ್ಲಿಯಲ್ಲಿ ತಿಳಿಸಿದ್ದಾರೆ. ಎತ್ತಿನ ಹೊಳೆ ಯೋಜನೆ ಅನುಷ್ಠಾನಕ್ಕೆ, ಶೇಕಡ **25** ರಷ್ಟು ಆರ್ಥಿಕ ನೆರವು ನೀಡುವಂತೆ, ಕೇಂದ್ರ ಜಲಶಕ್ತಿ ಖಾತೆ ಸಚಿವರಿಗೆ ಪ್ರಸ್ತಾವ ಸಲ್ಲಿಸಿದ್ದು, ಸಕಾರಾತ್ಮಕ ಸ್ಪಂದನೆ ದೊರೆತಿದೆ, ಎಂದರು. ಕೃಷ್ಣಾ ನ್ಯಾಯಾಧಿಕರಣ **–2**ರ ಅಂತಿಮ ತೀರ್ಪಿನಂತೆ, ರಾಜ್ಯ ಪರಿಪತ್ರ – ಗ್ಯಾಝೆಟಿಯರ್ ಹೊರಡಿಸುವ ಮುನ್ನ, ಜುಲೈ ಅಂತ್ಯದೊಳಗೆ, ಕೇಂದ್ರ ಜಲ ಶಕ್ತಿ ಖಾತೆ ಸಚಿವ ಸಿ.ಆರ್. ಪಾಟೀಲ, ಸಭೆ ಕರೆಯುವ ಭರವಸೆ ನೀಡಿದ್ದಾರೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಹೇಳಿದರು.

<><><>

**5.** ಕೇಂದ್ರ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮ **(MSME)** ರಾಜ್ಯ ಖಾತೆ, ಸಚಿವರಾದ ಶೋಭಾ ಕರಂದ್ಲಾಜೆ, ಬೆಂಗಳೂರಿನ ಕೇಂದ್ರ ಕಾಯರ್ ತಂತ್ರಜ್ಞಾನ ಸಂಸ್ಥೆಗೆ, ಭೇಟಿ ನೀಡಿದ್ದು, ಕಾಯರ್ ಮಂಡಳಿಯ ಪ್ರಗತಿ ಪರಿಶೀಲಿಸುತ್ತಿದ್ದಾರೆ.

<><><>

**6.** ದಕ್ಷಿಣಕನ್ನಡ ಜಿಲ್ಲೆಯ, ಮಂಗಳೂರು ವಿಭಾಗದಲ್ಲಿ, ಪೆಟ್ರೋಲಿಯಂ ಮತ್ತು ತೈಲ ಕಂಪೆನಿಗಳು, ರಾಸಾಯನಿಕ ಕೈಗಾರಿಕೆಗಳು ಹಾಗೂ ಬಂದರು ಇದ್ದು, ದುರಂತದ ತುರ್ತು ಪರಿಸ್ಥಿತಿ ನಿರ್ವಹಣೆಗಾಗಿ, ಅಗ್ನಿಶಾಮಕ ಇಲಾಖೆಯನ್ನು ಸಶಕ್ತಗೊಳಿಸಲಾಗಿದೆ ಎಂದು, ಗೃಹ ಖಾತೆ ಸಚಿವ, ಜಿ. ಪರಮೇಶ್ವರ ತಿಳಿಸಿದ್ದಾರೆ. ಉಳ್ಳಾಲದ ಅಗ್ನಿಶಾಮಕ ಠಾಣೆಯ, ನೂತನ ಕಟ್ಟಡ ನಿರ್ಮಾಣಕ್ಕೆ, ಶಿಲಾನ್ಯಾಸ ನೆರವೇರಿಸಿ, ಮಾತನಾಡಿದರು. ಮುಲ್ಕಿ ಮತ್ತು ಕಡಬ ತಾಲೂಕಿಗೆ, ಅಗ್ನಿಶಾಮಕ ಠಾಣೆಯನ್ನು ಮಂಜೂರು ಮಾಡಲಾಗಿದೆ. ಸದ್ಯದಲ್ಲೇ ಕಾಮಗಾರಿ ಆರಂಭಗೊಳ್ಳಲಿದೆ ಎಂದು, ಸಚಿವರು, ಹೇಳಿದರು.

<><><>

**7.** ಶತಮಾನ ಕಂಡ, ಮೈಸೂರು ವಿಶ್ವವಿದ್ಯಾಲಯ, ಮೊದಲ ಬಾರಿಗೆ, ಸ್ನಾತಕೋತ್ತರ ಪದವಿಗಳ ಪರೀಕ್ಷೆಯನ್ನು, ಒಂದೇ ಸೂರಿನಡಿ ನಡೆಸಿ, ಪರೀಕ್ಷೆ ನಿರ್ವಹಣೆಯ ಸುಧಾರಣೆಗೆ, ಕ್ರಮ ಕೈಗೊಂಡಿದೆ. ಪ್ರಸಕ್ತ ಶೈಕ್ಷಣಿಕ ಸಾಲಿನ, **2** ಮತ್ತು **4** ನೇ ಸೆಮಿಸ್ಟರ್ ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು, ವಿಶ್ವವಿದ್ಯಾಲಯದ **54** ವಿಭಾಗಗಳ ವಿದ್ಯಾರ್ಥಿಗಳು, ಒಂದೇ ಸೂರಿನಡಿ ಪರೀಕ್ಷೆ ಬರೆಯುತ್ತಿದ್ದಾರೆ ಎಂದು, ಮೌಲ್ಯಮಾಪನ ಕುಲಸಚಿವ ಎನ್.ನಾಗರಾಜು ತಿಳಿಸಿದ್ದಾರೆ.

<><><>

**8.** ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ಪುರಸ್ಕೃತೆ, ಬಾನು ಮು  ್ತಾಕ್ ಅವರ, 'ಎದೆಯ ಹಣತೆ' ಕಥೆಯನ್ನು ಆಧರಿಸಿದ ನಾಟಕ ಮತ್ತು ಸಾಹಿತಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ, 'ಮಾಯಾಮೃಗ' ನಾಟಕ ಪ್ರದರ್ಶನ, ನಾಳೆ ಸಂಜೆ **5.30**ಕ್ಕೆ ಹಾಸನಾಂಬಾ ಕಲಾ ಕ್ಷೇತ್ರದಲ್ಲಿ, ಜರುಗಲಿದೆ. ನೀನಾಸಮ್ ರಂಗ ಶಿಕ್ಷಣ ಕೇಂದ್ರದ ಪ್ರಾಂಶುಪಾಲ, ಎಂ.ಗಣೇಶ್ ಹೆಗ್ಗೋಡು ನಿರ್ದೇಶಿಸಿದ ಈ ನಾಟಕವನ್ನು, ಹೆಗ್ಗೋಡಿನ ಸತ್ಯಶೋಧನ ರಂಗ ಸಮುದಾಯದ ನೇತೃತ್ವದಲ್ಲಿ, ಜನಮನದಾಟ ರಂಗ ತಂಡ ಅಭಿನಯಿಸಲಿದೆ.

<><><>

**9.** ಗರ್ಭ ಕಂಠದ ಕ್ಯಾನ್ಸರ್ ತಡೆಗಟ್ಟಲು, ಆರೋಗ್ಯ ಇಲಾಖೆ, ಮೊದಲ ಹಂತದಲ್ಲಿ, ರಾಜ್ಯದ ಗಣಿ ಬಾಧಿತ ವಿಜಯನಗರ ಜಿಲ್ಲೆ ಹೊಸಪೇಟೆ ಸೇರಿದಂತೆ, **8** ತಾಲೂಕುಗಳಲ್ಲಿ ಎಚ್.ಪಿ.ವಿ. ಲಸಿಕೆಯನ್ನು, **14** ವರ್ಷದ ಹೆಣ್ಣು ಮಕ್ಕಳಿಗೆ ಉಚಿತವಾಗಿ ನೀಡಲಿದೆ. ಆರ್ಥಿಕವಾಗಿ ಹಿಂದುಳಿದಿರುವ, ಆದ್ಯತಾ ಪಡಿತರ ಚೀಟಿ ಹೊಂದಿರುವ, ಸರ್ಕಾರಿ, ಅನುದಾನಿತ ಮತ್ತು ಶಾಲೆ ಬಿಟ್ಟ **14** ವರ್ಷ ವಯಸ್ಸಿನ ಹೆಣ್ಣು ಮಕ್ಕಳಿಗೆ, ಎರಡು ಡೋಸ್ ಲಸಿಕೆ ನೀಡಲು, ಆದೇಶಿಸಲಾಗಿದೆ.

<><><>

**10.** ಹುಬ್ಬಳ್ಳಿ, ಬೆಳಗಾವಿ, ಶಿವಮೊಗ್ಗ ಹಾಗೂ ವಿಜಯಪುರ ಸೇರಿದಂತೆ, ವಿವಿಧ ವಿಮಾನ ನಿಲ್ದಾಣಗಳಿಗೆ, ಸ್ಥಳೀಯ ಮಹನೀಯರ ಹೆಸರನ್ನು, ನಾಮಾಂಕಿತ ಗೊಳಿಸುವಂತೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ, ಪ್ರಸ್ತಾವಗಳು ಸಲ್ಲಿಕೆಯಾಗಿವೆ ಎಂದು, ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಧಾರವಾಡದಲ್ಲಿ ತಿಳಿಸಿದ್ದಾರೆ. ಈ ನ್ಯಾಯಯುತ ಬೇಡಿಕೆ ಬಗ್ಗೆ, ಆಯಾ ಜಿಲ್ಲಾಡಳಿತಗಳಿಗೆ, ಪ್ರಾಧಿಕಾರ ಪ್ರಸ್ತಾವ ಸಲ್ಲಿಸಲಿದೆ. ಮಹನೀಯರ ಹೆಸರಿನ ನಾನಾ ಟ್ರಸ್ಟ್‌ಗಳಿಗೆ ಅನುದಾನದ ಸಮಸ್ಯೆ ಹಿನ್ನೆಲೆ, ಸಮಗ್ರ ವರದಿ ಸಿದ್ಧ ಪಡಿಸಿ, ಸರ್ಕಾರಕ್ಕೆ ಸಲ್ಲಿಸುವುದಾಗಿ, ಅವರು ಹೇಳಿದರು.

<><><>

**11.** ಇಂದು ಶ್ರೀ ಹಡಪದ ಅಪ್ಪಣ್ಣವರ ಜಯಂತಿ. ಧಾರವಾಡದ ಆಲೂರು ವೆಂಕಟರಾವ ಸಭಾ ಭವನದಲ್ಲಿ, ಮಧ್ಯಾಹ್ನ 2 ಗಂಟೆಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಶೇಷ ಕಾರ್ಯಕ್ರಮ ಆಯೋಜಿಸಿದೆ.

<><><>

**12.** ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಬಿಡುಗಡೆ ಮಾಡಿರುವ, ಪ್ರಯಾಣಿಕರ ಸಂತೃಪ್ತಿ ಸೂಚ್ಯಂಕದಲ್ಲಿ, ದೇಶದ ಒಟ್ಟು 62 ವಿಮಾನ ನಿಲ್ದಾಣಗಳ ಪೈಕಿ, ಬೆಳಗಾವಿ ವಿಮಾನ ನಿಲ್ದಾಣ 7ನೇ ಸ್ಥಾನ ಹಾಗೂ ಹುಬ್ಬಳ್ಳಿ ವಿಮಾನ ನಿಲ್ದಾಣ 8ನೇ ಸ್ಥಾನ ಪಡೆದಿದೆ. ಒಟ್ಟು 33 ಮಾನದಂಡಗಳ ಆಧಾರದಲ್ಲಿ, ಮೈಸೂರು ಹಾಗೂ ಕಲಬುರಗಿ ವಿಮಾನ ನಿಲ್ದಾಣಗಳು, 16ನೇ ಸ್ಥಾನ ಪಡೆದಿವೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.